ಶ್ರೀ ವಾಟಾಳ್ ನಾಗರಾಜ್ : ಇವತ್ತು 70 ಜನ ಶಾಸಕರು ಬಂಡಾಯ ಎದ್ದಿದ್ದಾರೆ. ಮಂತ್ರಿಗಳು ಕೆಲವರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಇವತ್ತು ಸರ್ಕಾರ ಇದೆಯೇ ಎಂದು ಕೇಳಬೇಕಾಗಿದೆ.

(ಗೊಂದಲ)

Sri R.V. Deshpande: Majority of the MLA's are boycotting the Session.

ಅಧ್ಯಕ್ಷರು : ಸ್ವಲ್ಪ ಶಾಂತಿಯುತವಾಗಿ ಇರಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ನಿಂತಿದ್ದಾರೆ. ಅವರಿಗಾದರೂ ಮರ್ಯಾದೆಯನ್ನು ಕೊಡಿ. ಅವರು ನನ್ನ ಗಮನವನ್ನು ಸೆಳೆಯುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಒಂದು ಪತ್ರವನ್ನು ಕಳುಹಿಸಿದ್ದೇನೆ. ರಾಜ್ಯಸರ್ಕಾರ ಒಂದು ಪ್ರಮುಖವಾದಂಥ ನಿರ್ಣಯವನ್ನು ತೆಗೆದುಕೊಂಡಿಲ್ಲ. ಅದು ಪತ್ರಿಕೆಗಳಲ್ಲೆಲ್ಲಾ ಬಂದಿದೆ. ಮೇಲ್ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಬ್ಬರು ಮಂತ್ರಿಗಳ ವಿರುದ್ಧ ಲೋಕಾಯುಕ್ತ ತನಿಖೆ ಮಾಡಬಹುದು ಎನ್ನತಕ್ಕಂಥ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ, ಸ್ವಾಗತಿಸುತ್ತೇನೆ, ಆದರೆ ಇದೇ ಸಮಯದಲ್ಲಿ ಈ ಹಿಂದೆಯೂ ಕೂಡ ಇಂಥ ಪ್ರಕರಣಗಳು ಬಂದಾಗ ಸಂಬಂಧಪಟ್ಟ ಮಂತ್ರಿಗಳು ನಮ್ಮ ಲೋಕಾಯುಕ್ತ ತನಿಖೆ ನಿರಾಳವಾಗಿ, ಸರಾಗವಾಗಿ ನಡೆಯಬೇಕು, ಅದಕ್ಕೆ ಯಾವ ಒತ್ತಡಗಳು ಬರಬಾರದು ಎನ್ನುವ ದೃಷ್ಟಿಯಿಂದ ರಾಜೀನಾಮೆಯನ್ನು ಕೊಟ್ಟಂಥ ಪ್ರಸಂಗಗಳು ಇವೆ. ಅದಕ್ಕೆ ಒಂದು ಸಾರಿ ತನಿಖೆಗೆ ಆಜ್ಞೆಯಾದ ಮೇಲೆ ಸರ್ಕಾರವೇ ಒಪ್ಪಿಕೊಂಡ ಮೇಲೆ ಆ ಮಂತ್ರಿಗಳು ಮುಂದುವರಿಯುವುದು ಸರಿಯೇ? ಹಾಗೆ ಮುಂದುವರೆದರೆ ಲೋಕಾಯುಕ್ತದಲ್ಲಿ ಯಾವ ತನಿಖೆಯನ್ನು ಮಾಡಬೇಕು ಎನ್ನತಕ್ಕ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆ? ಅದು ನಿಷ್ಪಕ್ಷಪಾತವಾದಂತಹ ತನಿಖೆಗೆ ಅವಕಾಶ ಆಗುವುದಿಲ್ಲ ಎನ್ನುವುದು ಜನಜನಿತವಾದಂತಹ ಮಾತು. ಆದ್ದರಿಂದ ಆ ಮಂತ್ರಿ ಏನಾದರೂ ರಾಜೀನಾಮೆ ಕೊಡುತ್ತಾರೆಯೇ? ಕೊಡದೆ ಇದ್ದರೆ I demand the resignation.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ರಾಜೀನಾಮೆ ಕೊಡಬೇಕು, ಕೊಡದೇ ಇದ್ದರೆ ಒತ್ತಾಯ ಮಾಡಬೇಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ತಮ್ಮ ನೆನಪಿಗೆ ಒಂದು ವಿಷಯವನ್ನು ತಂದು ಕೊಡುತ್ತೇವೆ, ಅದೇನೆಂದರೆ ಶ್ರೀಮಾನ್ ಸೋಮಶೇಖರ್ ಎನ್ನುವವರು ಮಂತ್ರಿಯಾಗಿದ್ದರು, ತನಿಖೆಗೆ ವಿಪ್ಪಾಟಾದ ಮೇಲೆ ಒಂದು ನಿಮಿಷ ಕಾಯದೆ ಅವರು ರಾಜೀನಾಮೆ ಕೊಟ್ಟರು. ತನಿಖೆಗೆ ಆಜ್ಞೆಯಾಗಿದೆ ಆದ್ದರಿಂದ ತಮ್ಮಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಬೇಡಿಕೊಳ್ಳುತ್ತೇನೆ.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಬಸವಲಿಂಗಪ್ಪನವರು ರಾಜೀನಾಮೆ ಕೊಟ್ಟಿದ್ದಾರೇನೋ ಅದಕ್ಕೆ ಸದನಕ್ಕೆ ಬಂದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ತನಿಖೆಯನ್ನು ಮಾಡಲಿಕ್ಕೆ ಸರ್ಕಾರ ನಿರ್ಣಯ ತೆಗೆದುಕೊಳ್ಳುವಾಗ ಪ್ರೈಮಾಫೇಸಿ ಕೇಸ್ ಇದೆ ಎನ್ನತಕ್ಕದ್ದು ಸರ್ಕಾರ ಬಹುತೇಕ ಒಪ್ಪಿಕೊಂಡಂತೆ ಆಗಿದೆ. ಆದ್ದರಿಂದ ತನಿಖೆ ನಿರ್ಭಂದಿತವಾಗಿ ಆಗಬೇಕೆಂದು ಆ